ಅದುಮುಖ್ಯವಾದ ಪಾಲಿಸಿ, ಮ್ಯಾಟರ್ ಅದನ್ನು ಸಭೆಯ ಮುಂದೆ ಇಡಬೇಕು, ಹಾಗೆ ಹೊರಗಡೆ ಭಾಷಣ ಮಾಡಿದರೆ..... ....

ಅಧ್ಯಕ್ಷರು.—ತಮ್ಮ ನೋಟೀಸ್‌ನ್ನು ಅವರಿಗೆ ಕಳುಹಿಸಿದ್ದೇವೆ, ಅವರು ಜವಾಬು ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಬಹಳ ಮುಖ್ಯವಾದ ವಿಷಯ ಅದಕ್ಕೆ ಈ ವಿಷಯವನ್ನು ಹೇಳಿದೆ

It was discussed in the other House, that is why I raised the matter today.

Madam SPEAKER.—Many matters may be discussed in the other House. The members here cannot raise that subject. ಅಲ್ಲಿ ಆದಎಲ್ಲ ವಿಷಯವನ್ನೂ ಇಲ್ಲಿ ತೆಗೆದುಕೊಂಡುಬರುವುದಕ್ಕೆ ಹೇಗೆ ಸಾಧ್ಯ ?

ಶ್ರೀ ವಾಟಾಳ್ ನಾಗರಾಜ್.—ಲೋನ್ ಕೊಡುವುದನ್ನು ನಿಲ್ಲಿಸಿದಾರೆ. ಸಾಮಿರಾರು ಜನ ಇದಕ್ಕಾಗಿ ಅಪ್ಲಿಕೇಷನ್‌ಅನು ಹಾಕಿಕೊಂಡಿದ್ದಾರೆ. ಅವರು ಒಂದೆ ಒಂದು ಮನೆಯನ್ನು ಕಟ್ಟಿಕೊಳ್ಳುವುದು ಆದಕ್ಕೆ ಅವರು ಹಾಕುವ ಪ್ಲಾನ್ ಬೇರೆ, ಇವರು ಹಾಕುವ ಪ್ಲಾನ್ ಬೇರೆ. ಇವರೇ ಮನೆ ಕಟ್ಟಿಕೊಳ್ಳುತ್ತೇವೆಂದರೆ ಹೇಗೆ ? ಸ್ಕೀಂ ಅನು, ಒದಲಾವಣೆ ಮಾಡಿ ಮೊದಲೆ ಇದ್ದ ಎಲ್ಲರಿಗೂ ಲೋನ್ ಕೊಡತಕ್ಕ ಪರಿಸ್ಥಿತಿಯನ್ನು ಕಲ್ಪಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಹೌಸಿಂಗ್ ಬೋರ್ಡಿನವರು ಕಟ್ಟುತಕ್ಕ ಮನೆಗಳು ಎಲ್ಲಾ ಸೋರುತ್ತಿವೆ' ಅವುಗಳು ಬಹಳ ಕೆಟ್ಟ ಪರಿಸ್ಥಿತಿಯಲ್ಲಿವೆ. ತಿರುಗಿ ಈಗ ಮತ್ತೆ ಮನೆ ಕಟ್ಟುವುದನ್ನು ಅವರಿಗೆ ಕೊಟ್ಟರೆ. ನೌಕರರು ಅವರ ಜನ್ಮದಲ್ಲಿ ಒಂದು ಮನೆಯನ್ನು ಕಟ್ಟಿಕೊಳ್ಳುವುದು, ಅದಕ್ಕೂ ಈ ರೀತಿಯ ಕೆಟ್ಟ ಮನೆಗಳನ್ನು ಕಟ್ಟಿದರೆ ಪ್ರಯೋಜನವಿಲ್ಲ. ಇದನ್ನು ಮಾಡತಕ್ಕಂಥಾದ್ದು ಸರ್ವಥಾ ಸರಿಯಾದುದಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆ ಬಗ್ಗೆ ನೋಟೀಸ್ ಕೊಟ್ಟರೆ ಉತ್ತರ ಕೊಡುತ್ತೇನೆ.

LATHI CHARGE ON SOME EMPLOYEES OF VOLTAS CO.

ಶ್ರೀ ಸಿ. ಬೈರೇಗೌಡ (ಪೇಮಗಲ್).—ವೋಲ್ಟಾಸ್ ಕಂಪನಿ ಕಾರ್ಮಿಕರ ಮೇಲೆ ಪೋಲೀಸ್‌ನವರು. ಚಾರ್ಜ್ ಮಾಡಿದ ಮೇಲೆ ಅದನ್ನು ಸರ್ಕಾರದ ಗಮನಕ್ಕೆ ತ ದಾಗ ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು. ಇವತ್ತಿನವರೆಗೂ ಅದರ ಬಗ್ಗೆ ಏನ್‌ಕ್ವೆಯರಿ ಆಗಿದೆಯೇ ಇಲ್ಲವೇ ಏನೂ ಗೊತ್ತಿಲ್ಲ. ಪೋಲೀಸರು ನಿಷ್ಕಾರಣವಾಗಿ ನೌಕರರನ್ನು ಹೊಡೆದಿದ್ದಾರೆ. ಅದು ಏನಾಯಿತು ಎನ್ನುವುದು ಗೊತ್ತಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ವೋಲ್ಟಾಸ್‌ನಲ್ಲಿ ಕೆಲಸ ಮಾಡುತ್ತಿರುವವರು 30 ಜನ, ಅವರ ವಾದ ವಿವಾದನಲ್ಲಿ ಪೋಲೀಸಿನವರು ಮಧ್ಯೆ ಪ್ರವೇಶ ಮಾಡಿ ನೂರಾರು ಜನ ಪೋಲೀಸರು ಕಳೆದ 4–5 ದಿವಸ ದಿಂದ ಅಲ್ಲಿ ಸ್ಟೇಷನ್ ಮಾಡಿದ್ದಾರೆ. ಜೊತೆಗೆ ಮದ್ರಾಸ್‌ನಿಂದ 50 ಜನರನ್ನು ಕರೆಸಿಕೊಂಡು ಸುತ್ತ ನಿಲ್ಲಿಸಿಕೊಂಡಿದ್ದಾರೆ. ಅಲ್ಲಿ ನೌಕರರಿಗೆ ಒಳಗೆ ಹೋಗುವುದಕ್ಕೂ ಬರುವುದಕ್ಕೂ ಕಷ್ಟವಾಗಿದೆ. ಅಲ್ಲಿ ಒಂದು ರೀತಿಯ ಭಯಾನಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಇದು ದೊಡ್ಡ ವಿಚಾರ ವಲ್ಲ, ಸರ್ಕಾರದವರು ಈ ವಿಚಾರದಲ್ಲಿ ಮ್ಯಾನೇಜ್‌ಮೆಂಟಿನವರಿಗೆ ಪೋಲೀಸ್ ಪದೆಯನ್ನು ಕೊಡುವುದು ನ್ಯಾಯವೇ ? ಅಲ್ಲಿ ಅನ್ಯಾಯವಾಗಿ ಜನರನ್ನು ಹೊಡೆದಿದ್ದಾರೆ. ಇವತ್ತಿನವರೆಗೂ ಅನಾವಶ್ಯಕವಾಗಿ ಪೋಲೀಸ್ ಸಿಬ್ಬಂದಿಯನ್ನು ಅಲ್ಲಿಗೆ ಹಾಕುವುದಕ್ಕೆ ಕಾರಣ ಏನು ? ಅಷ್ಟು ಪೋಲೀಸ್ ಸಿಬ್ಬಂದಿ ಅಲ್ಲಿಗೆ ಅವಶ್ಯಕತೆ ಏನ್ನುವುದನ್ನು ನೋಡಿ. ನೂರಾರು ಜನ ಪೋಲೀಸರನ್ನು ಅಲ್ಲಿಗೆ ಹಾಕುವುದರಿಂದ ಯಾರಿಗೆ ಲುಕ್ಸಾನು ? ಆದ್ದರಿಂದ ಕೂಡಲೇ ಅವರಿಗೆ ಹೇಳಿ ಕಳುಹಿಸಿ ಅವರನ್ನು ವಾಪಸ್ ಕರಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತೀರಾ ?

Sri H. M. CHANNABASAPPA.—This is rather very strange. Maintainance of law and order and prevention of breach of peace is the primary responsibility of the police.

ಎಲ್ಲೆಲ್ಲಿ ಯಾವ ಸಂದರ್ಭದಲ್ಲಿ ಎಷ್ಟು ಜನ ಪೋಲೀಸರು ಇರಬೇಕು, ಏನೇನು ಮಾಡಬೇಕು ಎನ್ನತಕ್ಕದ್ದರ ಬಗ್ಗೆ ನಾವು ಡೈರೆಕ್ಷನ್ ಕೊಡುವುದಕ್ಕಾಗುವುದಿಲ್ಲ. ಅಲ್ಲಿ ದೌರ್ಜನ್ಯ ನಡೆದಿದೆಯೇ, ಕೆಟ್ಟ ಕೆಲಸ ನಡೆದಿದೆಯೇ, ಆದನ್ನು.....

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ದೌರ್ಜನ್ಯ ನಡೆದಿಲ್ಲ, ಎಲ್ಲವೂ ಶಾಂತಿಯುತವಾಗಿ ನಡೆದಿದೆ; ಮ್ಯಾನೇಜ್‌ಮೆಂಟಿನವರ ಮಾತನ್ನು ಕೇಳಿಕೊಂಡು ಅಲ್ಲಿಯ ನೌಕರರನ್ನು, ಹೊಡೆದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ದೌರ್ಜನ್ಯ ನಡೆದಿಲ್ಲ, ಪೋಲೀಸರನ್ನು ಕರೆಸಿಕೊಂಡು ನೌಕರರನ್ನು ಹೊಡೆದಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಇದರ ಬಗ್ಗೆ ವಿಚಾರ ಮಾಡೋಣ, ಮಾನ್ಯ ಸದಸ್ಯರು ಯಾರೂ ಅನುಮಾನ ಪಡಬೇಕಾಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನೂರು ಜನ ಪೋಲೀಸರನ್ನು ಅಲ್ಲಿಗೆ ಹಾಕುವುದಕ್ಕೆ ಏನು ಸಂದರ್ಭ ಇದೆ ?

Sri H. M. CHANNABASAPPA.—It is not for me to give direction as to how many police men should go and what they should do. Law and order must be maintained.

Sri C. M. ARUGUGHAM.—Is there any need for so much of police ?

Sri H. M. CHANNABASAPPA.—That is not may job.

Sri C. M. ARUMUGHAM.—It is your job. You have sent such a big force in order to protect the management. The same old reply is given. The reply he gives is something like gramaphone record reply.

ಶ್ರೀ ವಾಟಾಳ್ ನಾಗರಾಜ್.—ತಾವೇ ಈ ಸಭೆಗೆ ಹೇಳಿದಿರಿ. ಇದನ್ನು ರಿ-ಎಕ್ಸಾಮಿನ್ ಮಾಡಿ ರಿಪೋರ್ಟು ಇಡುತ್ತೇವೆಂದು. ಒಂದು ತಿಂಗಳಾಯಿತು. ಆದಾದನಂತರ ಮತ್ತೆ ಕೇಳಿದ್ದಕ್ಕೆ ಒಂದು ವಾರದೊಳಗೆ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು. ಮಾನ್ಯ ಚನ್ನ ಬಸಪ್ಪನವರು ಇದರ ಬಗ್ಗೆ ಏನು ಮಾಡಿದ್ದಿರಿ ಎಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ಷಮಿಸಬೇಕು, ನಿಧಾನವಾಗಿದೆ, ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಯಾವಾಗ ಮಾಡುತ್ತೀರಿ ?

Sri H. M. CHANNABASAPPA.—All right I will make the Statement on saturday.